# ಚೆನ್ನೈನ ಸ್ಪಿನ್ ರಾಜ

ಪಂದ್ಯದಿಂದ ಪಂದ್ಯಕ್ಕೆ ಹೊಸ ದಾಖಲೆಗಳನ್ನು ತಮ್ಮ ಹೆಸರಿಗೆ ಬರೆದುಕೊಳ್ಳುತ್ತಿರುವ ಆರ್. ಅಶ್ವಿನ್ ಭಾರತೀಯ ಕ್ರಿಕೆಟ್ ಬಾನಂಗಳದ ಅಶ್ವಿನಿ ನಕ್ಷತ್ರ.

■ ಪ್ರಮೋದ ಕುಲಕರ್ಣಿ



ಭಾರತ ತಂಡವು ಟೆಸ್ಟ್ ಮ್ಯಾಚ್‌ನಲ್ಲಿ ಜಯಿಸಿದ ಒಟ್ಟು ಪಂದ್ಯಗಳು
**179**

ಟೆಸ್ಟ್ ಕ್ರಿಕೆಟ್‌ನ ಒಂದೇ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳ ಗುಚ್ಛ ಪಡೆದ ಸಂಖ್ಯೆ
**37**

ಟೆಸ್ಟ್ ಮ್ಯಾಚ್‌ನಲ್ಲಿ ಅಶ್ವಿನ್ ಗಳಿಸಿದ ವಿಕೆಟ್‌ಗಳು
**522**

'ಸದಾ ಹೊಸತು ಕಲಿಯಲು ಪ್ರಯತ್ನಿಸುತ್ತಿರುವುದು, ಅದರಲ್ಲಿ ಯಶಸ್ವಿಯಾಗುವುದು ನಿಮ್ಮ ದೊಡ್ಡ ಶಕ್ತಿ. ಇದನ್ನು ನಿರಂತರವಾಗಿ ಕಾಪಾಡಿಕೊಳ್ಳಿ'.

13 ವರ್ಷಗಳ ಹಿಂದೆ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಸಂದರ್ಭ ಆಗ ಭಾರತ ತಂಡದ ನಾಯಕರಾಗಿದ್ದ ಮಹೇಂದ್ರಸಿಂಗ್ ಧೋನಿ ಅವರು ಅಶ್ವಿನ್ ಕುರಿತು ಹೇಳಿದ್ದ ಮಾತಿದು. 'ಕ್ಯಾಪ್ಟನ್ ಕೂಲ್' ಧೋನಿ ಅಂದು ಆಡಿದ್ದ ಮಾತು ನನಗೆ ಇಂದಿಗೂ ಪ್ರೇರಣೆ ಎನ್ನುತ್ತಾರೆ ಅಶ್ವಿನ್.

ಇತ್ತೀಚೆಗೆ ಮಾಧ್ಯಮಗಳ ಜೊತೆಗಿನ ಸಂವಾದದ ವೇಳೆ 'ಧೋನಿ ಈಗ ನಿವೃತ್ತರಾಗಿರಬಹುದು. ವಿಕೆಟ್ ಉರುಳಿಸಿದಾಗ ಪ್ರತಿ ಬಾರಿಯೂ ಅವರ ಮಾತು ಪ್ರೇರಕ ಶಕ್ತಿಯಂತೆ ನೆನಪಾಗುತ್ತದೆ' ಎಂದಿದ್ದರು. ರಾಷ್ಟ್ರೀಯ ತಂಡದ ಭಾಗವಾಗಿ ವಿಕೆಟ್‌ಗಳ ಗುಚ್ಛ ಉರುಳಿಸುವ ಮೊದಲು ದೇಶಿ ಟೂರ್ನಿಗಳಲ್ಲಿ ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಹಗಲಿರುಳು ಹರಿಸಿದ ಬೆವರಿನಿಂದಾಗಿ ಅವರು 'ಸ್ಪಿನ್‌ನ ಚೆಪಾಕ್ ರಾಜ' ಎನಿಸಿದ್ದಾರೆ. ಬಾಂಗ್ಲಾದೇಶ ವಿರುದ್ಧದ ಸರಣಿಯಲ್ಲಿಯೂ ವಿಕೆಟ್ ಕಬಳಿಕೆಗಳ 'ಪರೇಡ್' ಮಾಡಿದ್ದಾರೆ.

ಒಂದೇ ಟೆಸ್ಟ್ ಪಂದ್ಯದಲ್ಲಿ ಶತಕ ಹೊಡೆದು ಐದು ವಿಕೆಟ್‌ಗಳನ್ನು ಗಳಿಸಿದ ಭಾರತದ ಮೊದಲ ಆಲ್‌ರೌಂಡರ್, ಟೆಸ್ಟ್‌ನಲ್ಲಿ ಹೆಚ್ಚು ಬಾರಿ (11) ಸರಣಿ ಶ್ರೇಷ್ಠ ಗೌರವ ಪಡೆದಿದ್ದ ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ದಾಖಲೆ ಸರಿಗಟ್ಟಿದ್ದು, ಅನಿಲ್ ಕುಂಬ್ಳೆ ಬಳಿಕ ಟೆಸ್ಟ್‌ನಲ್ಲಿ ಹೆಚ್ಚು ವಿಕೆಟ್ ಕಬಳಿಸಿದ ಭಾರತದ ಬೌಲರ್, ಒಂದೇ ವರ್ಷದಲ್ಲಿ 500 ರನ್ ಹೊಡೆದು 50 ವಿಕೆಟ್‌ಗಳನ್ನು ಉರುಳಿಸಿದ ಭಾರತದ ಎರಡನೇ ಆಟಗಾರ, ಭಾರತದ ನೆಲದಲ್ಲಿ ಆಡಿದ ಪಂದ್ಯಗಳಲ್ಲಿ ಹೆಚ್ಚು ವಿಕೆಟ್ ಕಬಳಿಸಿದ ಆಟಗಾರ, ಟೆಸ್ಟ್ ಕ್ರಿಕೆಟ್‌ನಲ್ಲಿ ವೇಗವಾಗಿ 500 ವಿಕೆಟ್‌ಗಳ ಸಾಧನೆ ಮಾಡಿದ ಜಗತ್ತಿನ ಎರಡನೇ ಬೌಲರ್ ಹೀಗೆ ಅನೇಕ ದಾಖಲೆಗಳ ಒಡೆಯರಾಗಿದ್ದಾರೆ.

ಚುರುಕಿನ ಪಾದಚಲನೆ, ಚೆಂಡು ಎಸೆಯುವಾಗ ತೋರುವ ಕೈಚಳಕದಿಂದಾಗಿ ಎದುರಾಳಿ ಬ್ಯಾಟ್ಸ್‌ಮನ್ ಗೊಂದಲಕ್ಕೆ ಒಳಗಾಗುವಂತೆ ಮಾಡುವ ಕೌಶಲ ಅಶ್ವಿನ್‌ಗೆ ಕರಗತವಾಗಿದೆ. 2011ರಿಂದ ಇದುವರೆಗೆ ಒಟ್ಟು 102 ಟೆಸ್ಟ್ ಪಂದ್ಯಗಳನ್ನಾಡಿರುವ ಅವರು 527 ವಿಕೆಟ್‌ಗಳನ್ನು ಉರುಳಿಸಿದ್ದಾರೆ. ಇದರಲ್ಲಿ ತವರಿನಲ್ಲಿ ಆಡಿದ ಪಂದ್ಯಗಳಿಂದ 374, ವಿದೇಶದಲ್ಲಿ 40 ಪಂದ್ಯಗಳಿಂದ 153 ವಿಕೆಟ್‌ಗಳು ಸೇರಿವೆ. ಏಷ್ಯಾಖಂಡದ ವ್ಯಾಪ್ತಿಯಲ್ಲಿ ಹೆಚ್ಚು ವಿಕೆಟ್‌ಗಳನ್ನು ಪಡೆದ ಎರಡನೇ ಬೌಲರ್ ಎನ್ನುವ ಗೌರವವನ್ನೂ ಪಡೆದಿದ್ದಾರೆ. ಇಷ್ಟು ವರ್ಷಗಳ ಕಾಲ ಕನ್ನಡಿಗ ಅನಿಲ್ ಕುಂಬ್ಳೆ (419 ವಿಕೆಟ್‌ಗಳು) ಹೆಸರಿನಲ್ಲಿದ್ದ ದಾಖಲೆಯನ್ನು ಅಶ್ವಿನ್ ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಅಳಿಸಿಹಾಕಿದರು. ಮುತ್ತಯ್ಯ ಮುರಳೀಧರನ್ (612 ವಿಕೆಟ್‌ಗಳು) ಅಗ್ರಸ್ಥಾನದಲ್ಲಿದ್ದು, ಅಶ್ವಿನ್ ಎರಡನೇ ಸ್ಥಾನದಲ್ಲಿದ್ದಾರೆ.

ತವರಿನ ಪಂದ್ಯಗಳಲ್ಲಿ ತಮ್ಮ ವೇಗದ ಬೌಲಿಂಗ್ ಶಕ್ತಿಗೆ ಅನುಗುಣವಾಗಿ ಕ್ರಿಕೆಟ್‌ನ ಬಲಿಷ್ಠ ತಂಡಗಳಾದ ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಹಾಗೂ ಇಂಗ್ಲೆಂಡ್ ಪಿಚ್‌ಗಳನ್ನು ಸಿದ್ಧಪಡಿಸಿಕೊಳ್ಳುತ್ತವೆ. ಅಂಥ ಪಿಚ್‌ಗಳಲ್ಲಿಯೂ ಸ್ಪಿನ್ ಮೋಡಿಯಿಂದ ಎದುರಾಳಿ ಬ್ಯಾಟರ್‌ಗಳನ್ನು ಅಶ್ವಿನ್ ಕಕ್ಕಾಬಿಕ್ಕಿ ಮಾಡುತ್ತಾರೆ. ಆಸ್ಟ್ರೇಲಿಯಾ (114), ಇಂಗ್ಲೆಂಡ್ (105) ತಂಡಗಳ ಎದುರು ಹೆಚ್ಚು ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಶ್ರೀಲಂಕಾ, ಬಾಂಗ್ಲಾದೇಶ ತಂಡಗಳ ಎದುರೂ ಅವರ ಸ್ಪಿನ್ ಮೋಡಿ ನಡೆದಿದೆ. ಟೆಸ್ಟ್‌ನಲ್ಲಿ ಒಟ್ಟು 500 ವಿಕೆಟ್‌ಗಳನ್ನು ಪಡೆದಿದ್ದಾಗ, ಅದರಲ್ಲಿ 249 ವಿಕೆಟ್‌ಗಳನ್ನು ಎಡಗೈ ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿಯೇ ಗಳಿಸಿದ್ದರು ಎನ್ನುವುದು ವಿಶೇಷ. ಜಗತ್ತಿನ ಬಲಿಷ್ಠ ತಂಡಗಳು ಭಾರತದ ಪ್ರವಾಸ ಕೈಗೊಂಡಾಗ ಅಶ್ವಿನ್ ಸ್ಪಿನ್ ಕೌಶಲದಿಂದಾಗಿ ಎರಡು ಮೂರು ದಿನಗಳಲ್ಲಿಯೇ ಟೆಸ್ಟ್ ಪಂದ್ಯ ಮುಗಿದ ಉದಾಹರಣೆಗಳು ಸಾಕಷ್ಟಿವೆ.

ಭಾರತ ತಂಡ 2011ರಲ್ಲಿ ಐಸಿಸಿ ಏಕದಿನ ವಿಶ್ವಕಪ್ ಗೆದ್ದಾಗ, 2013ರಲ್ಲಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಚಾಂಪಿಯನ್ ಆದಾಗ ಅಶ್ವಿನ್ ತಂಡದಲ್ಲಿದ್ದರು. ಅದೇ ವರ್ಷ ವೆಸ್ಟ್ ಇಂಡೀಸ್ ವಿರುದ್ಧ ಆಡುವ ಮೂಲಕ ಭಾರತ ಟೆಸ್ಟ್ ತಂಡದಲ್ಲಿ ಮೊದಲ ಬಾರಿಗೆ ಸ್ಥಾನ ಗಿಟ್ಟಿಸಿಕೊಂಡರು. ಪದಾರ್ಪಣೆ ಪಂದ್ಯದಲ್ಲಿಯೇ ಐದು ವಿಕೆಟ್‌ಗಳ ಗೊಂಚಲು ತಮ್ಮದಾಗಿಸಿಕೊಂಡರು. ಅಶ್ವಿನ್ ತಂದೆ ರವಿಚಂದ್ರನ್ ಕ್ಲಬ್ ಹಂತದ ಕ್ರಿಕೆಟ್ ಟೂರ್ನಿಗಳಲ್ಲಿ ವೇಗದ ಬೌಲರ್ ಆಗಿ ಹೆಸರು ಮಾಡಿದ್ದರು. ಅಶ್ವಿನ್ ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಬಿ.ಟೆಕ್ ಪದವೀಧರರಾಗಿದ್ದು, ಭಾರತ ತಂಡ, ದೇಶಿ ಟೂರ್ನಿಗಳಲ್ಲಿ ಚೆನ್ನೈ ತಂಡ, ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್, ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್, ಕಿಂಗ್ಸ್ ಇಲೆವನ್ ಪಂಜಾಬ್, ಡೆಲ್ಲಿ ಕ್ಯಾಪಿಟಲ್ಸ್, ರಾಜಸ್ಥಾನ ರಾಯಲ್ಸ್– ಹೀಗೆ ಅನೇಕ ತಂಡಗಳಲ್ಲಿ ಆಡಿದ್ದಾರೆ. ಬ್ಯಾಟಿಂಗ್ ಅಬ್ಬರವೇ ಹೆಚ್ಚಿರುವ ಚುಟುಕು ಕ್ರಿಕೆಟ್‌ನಲ್ಲಿಯೂ ಅಶ್ವಿನ್ ಕೈಚಳಕದ ಮೋಡಿ ಮಾಡಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in